O.S.No.22/2021 PW-1

ದಿನಾಂಕ : 29.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು :-ಪ್ರತಿವಾದಿ ನಂ.2 ರಿಂದ 5 ರವರ ಶ್ರೀ SKP ವಕೀಲರ ಪರವಾಗಿ ಶ್ರೀ PBP ವಕೀಲರಿಂ:-**

ನನ್ನ ಚಿಕ್ಕಪ್ಪ ನಾಗಪ್ಪನಿಗೆ ಒಬ್ಬ ಗಂಡು ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಅವರುಗಳ ಹೆಸರು ಅಂಬು, ಜಯಶ್ರೀ ಮತ್ತು ಪರಮೇಶ್ವರ ಅಂತಾ ಇರುತ್ತದೆ. ಅಂಬುಬಾಯಿ ಮತ್ತು ಜಯಶ್ರೀ ರವರು ಜೀವಂತ ಇರುತ್ತಾರೆ, ಅವರನ್ನು ಈ ದಾವೆಯಲ್ಲಿ ಪಕ್ಷಗಾರನಾಗಿ ಮಾಡಿಲ್ಲಾ ಎಂದರೆ ಸರಿ. ನನ್ನ ಅಜ್ಜ ಗುರುಪ್ಪನಿಗೆ ಸರ್ವೆ ನಂ.86 ಜಮೀನು ಇತ್ತು ಎಂದರೆ ಸರಿ. ಅದರಂತೆ ಸರ್ವೆ ನಂ.123 ಇನ್ನೊಂದು ಜಮೀನು ನನ್ನ ಅಜ್ಜನ ಹೆಸನರಿನಲ್ಲಿ ಇತ್ತು ಎಂದರೆ ಸರಿ. ಸದರಿ ಸರ್ವೆ ನಂ.86 ಮತ್ತು 123 ಜಮೀನುಗಳು ನನ್ನ ತಂದೆ ಬಸಣ್ಣ ಮತ್ತು ನನ್ನ ಚಿಕ್ಕಪ್ಪ ನಾಗಪ್ಪನಿಗೆ ಬಂದಿದ್ದವು ಎಂದರೆ ಸಾಕ್ಷಿಯು ನನ್ನ ತಂದೆಗೆ ಬಸಣ್ಣನಿಗೆ ಬಂದಿರುತ್ತವೆ ಎಂದು ನುಡಿಯುತ್ತಾರೆ.

ಸರ್ವೆ ನಂ.123 ಜಮೀನು ನನ್ನ ತಂದೆಯ ಪಾಲಿಗೆ ಬಂದಿದ್ದು ನನ್ನ ಮದುವೆಯ ಸಮಯದಲ್ಲಿ ಸದರಿ ಜಮೀನಿನ್ನು ನನ್ನ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂ.82 ಒಟ್ಟು ಕ್ಷೇತ್ರ 06 ಎಕರೆ 13 ಗುಂಟೆ ಜಮೀನು ನನ್ನ ಚಿಕ್ಕಪ್ಪ ನಾಗಪ್ಪನಿಗೆ ಬಂದಿದ್ದು ಅವರು ಮಾರಾಟ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಸರ್ವೆ ನಂ.123 ಮತ್ತು 82 ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲಾ ಎಂದರೆ ಸರಿ. ನನ್ನ ಅಜ್ಜನ ಜೀವಂತ ಇರುವಾಗ ತನ್ನ ಮಕ್ಕಳಾದ ಬಸಣ್ಣ, ನಾಗಣ್ಣ ಮತ್ತು ಅಣ್ಣರಾಯ

ರವರಿಗೆ ಪಾಲು ವಾಟ್ನಿ ಮಾಡಿ ಬಸಣ್ಣನಿಗೆ ಸರ್ವೆ ನಂ.123 ನಾಗಣ್ಣನಿಗೆ ಸರ್ವೆ ನಂ.82 ಮತ್ತು ಅಣ್ಣರಾಯ ರವರಿಗೆ ಸರ್ವೆ ನಂ.120 ರ ಜಮೀನುಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿ.

ಅಣ್ಣರಾಯ ರವರಿಗೆ ಹೆಚ್ಚಿಗೆ ಭೂವಿ ಇರುವುದರಿಂದ ಆತನ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಣ್ಣರಾಯ ರವರ ಮಕ್ಕಳು ಸುಮಾರು 40 ವರ್ಷಗಳಿಂದ ಸರ್ವೆ ನಂ.120 ರಲ್ಲಿ ಕಬ್ಜಾ ವಹಿವಾಟಿನಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಪಾಲಿನ ಆಸ್ತಿಯನ್ನು ಮಾರಾಟ ಮಾಡಿಕೊಂಡು ಈಗ ಅಣ್ಣರಾಯ ರವರ ಆಸ್ತಿಯಲ್ಲಿ ಪಾಲು ಕೇಳಿ ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ